# 1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು

## ಎಸ್.ಸಿ. ನಂ.89/2020

ಚಾಸಾಃ 35 ಪ್ರಾಸಾಃ 19

**ದಿನಾಂಕ 19.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

| | |
|---|---|
| ಹೆಸರು | ಹೆಚ್ ಕೃಷ್ಣಮೂರ್ತಿ |
| ತಂದೆಯ ಹೆಸರು | ಲೇಟ್ ಕೆ ಹನುಮಂತಯ್ಯ |
| ವಯಸ್ಸು | 59 ವರ್ಷ |
| ಕೆಲಸ | ಪೊಲೀಸ್ ಸಬ್ ಇನ್ಸ್ ಪೆಕ್ಟರ್ , ಕುದೂರು ಪೊಲೀಸ್ ಠಾಣೆ , ಮಾಗಡಿ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ , |
| ವಾಸಸ್ಥಳ | ತುಮಕೂರು |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು 2016 ರಿಂದ 2021 ರವರಿಗೆ ಕ್ಯಾತ್ಸಂದ್ರ ಪೊಲೀಸ್ ಠಾಣೆಯಲ್ಲಿ ಸಹಾಯಕ ಸಬ್ ಇನ್ಸ್ ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2) ದಿ 01-2-20 ರಂದು ಚಾಸಾ-37 ರವರು ಈ ಪ್ರಕರಣದಲ್ಲಿ ಬಾಲನೇತ್ರಯ್ಯ ಇತನನ್ನು ಕೊಲೆ ಮಾಡಿದ ಆರೋಪಿಗಳ ಪತ್ತೆಗಾಗಿ ಚಾಸಾ-26,27 ಮತ್ತು ನನ್ನನ್ನು ನೇಮಿಸಿದ್ದರು. ಅದೇ ದಿನ ಬೆಳಗ್ಗೆ 6.15 ಗಂಟೆ ಸಮಯಕ್ಕೆ ಮಾದನಾಯಕನಹಳ್ಳಿಯ ಅಕ್ಕಪಕ್ಕದಲ್ಲಿ ಓಡಾಡುತ್ತಿರುತ್ತಾರೆಂದು ಬಾತ್ಮಿದಾರರಿಂದ ಮಾಹಿತಿ ಸಂಗ್ರಹಿಸಿ

ಸಿದ್ದಹೊಸನಹಳ್ಳಿ ಕ್ರಾಸ್ ಬಳಿ ಇಬ್ಬರು ಅಸಾಮಿಗಳು ಅನುಮಾನಸ್ಪದವಾಗಿ ಓಡಾಡುತ್ತಿರುವಾಗ ಅವರನ್ನು ಹಿಡಿದು ವಿಚಾರಿಸಿದಾಗ ಅದರಲ್ಲಿ ಒಬ್ಬನು ಭರತ್ ಬಿನ್ ಮಹಾದೇವಯ್ಯ, ಕಾಂತರಾಜು ಬಿನ್ ಮಹಾದೇವಯ್ಯ , ವಾಸಃ ಬಸವಣ್ಣನ ದೇವಸ್ಥಾನ, ಮಾರನಾಯಕನಪಾಳ್ಯ ಎಂದು ತಿಳಿಸಿದ್ದು ನಂತರ ಆರೋಪಿತರನ್ನು ವಿಚಾರಿಸಿದಾಗ ಬಾಲನೇತ್ರಯ್ಯನನ್ನು ಕೊಲೆ ಮಾಡಿರುವುದಾಗಿ ಹೇಳಿದ ನಂತರ ಅವರನ್ನು ವಶಕ್ಕೆ ಪಡೆದು ಅದೇ ದಿನ 7.45 ಸಮಯದಲ್ಲಿ ಚಾಸಾ-37 ರವರ ಮುಂದೆ ಹಾಜರುಪಡಿಸಿ ವರದಿಯನ್ನು ನೀಡಿರುತ್ತಾರೆ. ದಿ 01.2.20 ರ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-32 ಎಂದು, ಸಾಕ್ಷಿಯಸಹಿಯನ್ನು ನಿಪಿ-32(ಎ) ಎಂದು ಗುರುತಿಸಲಾಯಿತು. ಎ-1 ಭರತ್ ನ್ನು ಮೊಬೈಲ್ ವಿ ಸಿ ಮೂಲಕ ಹಾಜರುಪಡಿಸಿದ್ದು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. 2 ನೇಆರೋಪಿ ಕಾಂತರಾಜು ಹಾಜರಾತಿ ವಿನಾಯತಿ ಅರ್ಜಿಯನ್ನು ಹಾಕಿದ್ದು ಅವರ ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇರುವುದಿಲ್ಲವೆಂದು ನುಡಿದಿರುತ್ತಾರೆ.

**ಪಾಟೀ ಸವಾಲು 1 ಮತ್ತು 2 ಆರೋಪಿಯ ಪರ ಶ್ರೀ ಕೆ ಹೆಚ್ ಜಿ ವಕೀಲರಿಂದ ಃ-**

ಆರೋಪಿ ಪರ ವಕೀಲರ ಕೋರಿಕೆಯ ಮೇರಗೆ ಪಾಟೀ ಸವಾಲು ಮುಂದೂಡಲಾಯಿತು.

ಮರುವಿಚಾರಣೆ ಇಲ್ಲ-

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.